
353

DR. MEENAKSHI RAMACHANDRA.




ಆಧ್ಯಾತ್ಮ ಪಥದ ಕೈಗಂಬ

# ಶ್ರೀ ನಾರಾಯಣ ಗುರು

ಡಾ. ಮೀನಾಕ್ಷಿ ರಾಮಚಂದ್ರ

354

Ayodhya
PUBLICATIONS
88



ಅಧ್ಯಾತ್ಮ ಪಥದ ಕೈಗಂಬ

# ಶ್ರೀ ನಾರಾಯಣ ಗುರುಗಳು

ಡಾ. ಮೀನಾಕ್ಷಿ ರಾಮಚಂದ್ರ

SHRI DHARMASTHALA MANJUNATHESHWARA LAW COLLEGE

355

ಅಧ್ಯಾತ್ಮ ಪಥದ ಕೈಗಂಬ

# ಶ್ರೀ ನಾರಾಯಣ ಗುರುಗಳು

ಡಾ. ಮೀನಾಕ್ಷಿ ರಾಮಚಂದ್ರ

Ayodhya
PUBLICATIONS

ಅಯೋಧ್ಯಾ ಪಬ್ಲಿಕೇಷನ್ಸ್ ಪ್ರೈ. ಲಿ.

ನಂ. 1571, 36ನೇ ಅಡ್ಡರಸ್ತೆ,
ಡಾ. ಪುನೀತ್‌ರಾಜ್‌ಕುಮಾರ್ ರಸ್ತೆ, ಬನಶಂಕರಿ 2ನೇ ಹಂತ,
ಬೆಂಗಳೂರು – 560 070.

SHRI DHARMASTHALA MANJUNATHESHWARA LAW COLLEGE MANGALORE

356

**Shri Narayana Gurugalu**

**A Book by :** Dr. Meenakshi Ramachandra.

Ayodhya
PUBLICATIONS

Published by: **Ayodhya Publications Pvt. Ltd.**
#1571, 36th cross, Dr. Puneeth Rajkumar Road,
Banashankari 2nd stage, Bengaluru - 560070. Bharat.
**Mobile:** 9620916996.
**E-mail:** ayodhyapublications@gmail.com

No part of this publication may be reproduced or transmitted in any form or by any means, electronic or mechanical, including photocopy, recording or any information storage and retrieval system, without permission in writing from the publisher/ Writer.

ಹಕ್ಕುಗಳು: ಲೇಖಕರದು

ಮೊದಲ ಮುದ್ರಣ: 2024
ಕಾಗದ ಬಳಕೆ: 70 ಜಿಎಸ್‌ಎಂ ಬುಕ್‌ಪ್ರಿಂಟ್
ಗಾತ್ರ: 1/8 ಡೆಮಿ ಸೈಜ್ ◆ ಪುಟಗಳು: 176 ◆ ಬೆಲೆ: ರೂ. 199/–
ಮುಖಪುಟ ವಿನ್ಯಾಸ: ಪ್ರಶಾಂತ್ ವಿಟ್ಲ
ಒಳಪುಟ ವಿನ್ಯಾಸ: ಉಮಾದೇವಿ ಎಸ್. ಎಲ್.

ISBN: 978-93-91852-75-7

ಮುದ್ರಣ: ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು

SCAN HERE

**Buy our books @**
**www.ayodhyabooks.com**
**Mobile: 9620916996**

# ಲೇಖಕರ ಪರಿಚಯ

## ಡಾ. ಮೀನಾಕ್ಷಿ ರಾಮಚಂದ್ರ



ಗಡಿನಾಡ ಕನ್ನಡಿಗಳಾಗಿ ಕಾಸರಗೋಡಿನಲ್ಲಿ ಜನಿಸಿದ ಡಾ. ಮೀನಾಕ್ಷಿ ರಾಮಚಂದ್ರ ಕನ್ನಡ, ಮಲಯಾಳಂ, ಇಂಗ್ಲಿಷ್ ಹಾಗೂ ತುಳುವಿನಲ್ಲಿ ಸ್ವತಂತ್ರ ಹಾಗೂ ಅನುವಾದ ಕೃತಿಗಳನ್ನು ರಚಿಸಿದ್ದಾರೆ. ಸಂಶೋಧನೆ, ಸಂಪಾದನೆ, ಭಾಷಾಂತರಗಳೊಂದಿಗೆ ಕೇರಳ ಸರಕಾರ ಪ್ರಾಯೋಜಿತ ಕನ್ನಡ-ಮಲಯಾಳಂ ನಿಘಂಟು ರಚನಾ ಕಾರ್ಯದಲ್ಲೂ ಕೈಜೋಡಿಸಿದವರು. ವೃತ್ತಿಯಲ್ಲಿ ಮಂಗಳೂರಿನ ಬೆಸೆಂಟ್ ಮಹಿಳಾ ಕಾಲೇಜಿನಲ್ಲಿ ಸುದೀರ್ಘಕಾಲ ಕನ್ನಡ ಪ್ರಾಧ್ಯಾಪಕಿಯಾಗಿ, ವಿಭಾಗ ಮುಖ್ಯಸ್ಥೆಯಾಗಿ ದುಡಿದು ನಿವೃತ್ತಿ ಹೊಂದಿದರೂ, ಪ್ರವೃತ್ತಿಯಲ್ಲಿ ಬರವಣಿಗೆ ಮತ್ತು ರಂಗಭೂಮಿ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡವರು. ಮಂಗಳೂರಿನಲ್ಲಿ ಸಮಾನ ಮನಸ್ಕರನ್ನು ಸೇರಿಸಿಕೊಂಡು "ಕಲಾಭಿ" ಎನ್ನುವ ರಂಗಸಂಸ್ಥೆಯೊಂದನ್ನು ಹುಟ್ಟುಹಾಕಿ, ಅದರ ವಿಶ್ವಸ್ಥ ಮಂಡಳಿ ಹಾಗೂ ಅಧ್ಯಕ್ಷ ಸ್ಥಾನದಲ್ಲಿದ್ದು, ಹಲವಾರು ರಂಗಕೇಂದ್ರಿತ ಕಾರ್ಯಕ್ರಮಗಳನ್ನು ನಿರಂತರವಾಗಿ ನಡೆಸುತ್ತಾ ಬಂದಿರುವವರು. ಅದರೊಂದಿಗೆ ಪ್ರಸ್ತುತ ಮಂಗಳೂರಿನ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾನೂನು ಕಾಲೇಜಿನಲ್ಲಿ ಪ್ರಾಧ್ಯಾಪಿಕೆಯಾಗಿ ಸೇವೆ ಸಲ್ಲಿಸುತ್ತಿರುವವರು.

ಅಖಿಲ ಭಾರತ ಮಟ್ಟದ ಕಾವ್ಯ ಪ್ರಶಸ್ತಿ, ಕನ್ನಡ ಸಾಹಿತ್ಯ ಪರಿಷತ್ ಕಥಾ ಪ್ರಶಸ್ತಿ, ಗಡಿನಾಡ ರಾಜ್ಯೋತ್ಸವ ಪ್ರಶಸ್ತಿ, ಕಲ್ಲಚ್ಚು ಪ್ರಶಸ್ತಿ, ದೇವರ ದಾಸಿಮಯ್ಯ ಸಹಸ್ರಮಾನೋತ್ಸವ ಪ್ರಶಸ್ತಿಗಳೊಂದಿಗೆ ಚುಟುಕು ಸಾಹಿತ್ಯ ಪರಿಷತ್ತು, ಕೇರಳ ಲೈಬ್ರೆರಿ ಅಸೋಸಿಯೇಷನ್, ಕರ್ನಾಟಕ ದೇವಾಂಗ ಸಂಘ, ಕೇರಳ ಪದ್ಮಶಾಲಿಯಾ ಅಸೋಸಿಯೇಷನ್, ಅಬ್ಬಕ್ಕೋತ್ಸವ ಸಮಿತಿ ಮುಂತಾದ ಹಲವು ಸಂಘ ಸಂಸ್ಥೆಗಳಿಂದ ಸನ್ಮಾನಿಸಲ್ಪಟ್ಟವರು.

ಅಯೋಧ್ಯಾ ಪಬ್ಲಿಕೇಶನ್ಸ್‌ನಿಂದ ಪ್ರಕಟವಾದ ಲೇಖಕರ ಇನ್ನೊಂದು ಕೃತಿ – **ನರಾಧಮರ ನಡುವೆ.**

DHARMASTHALA MANJUNA… LAW COLLEGE MANGALORE

# ಲೇಖಕಿಯ ಅಂತರಂಗದ ನುಡಿಗಳು

ಕೇರಳದ ಆಧ್ಯಾತ್ಮಿಕ ಲೋಕದಲ್ಲಿ ಸಾಮಾಜಿಕ ಚಿಂತನೆಯನ್ನು ಮಿಳಿತಗೊಳಿಸಿ, ವರ್ಣ, ವರ್ಗ, ಧರ್ಮಗಳ ಕಾರಣಗಳಿಂದ ವಿಭಜಿತಗೊಂಡ ಮಾನವ ಸಮೂಹಗಳನ್ನು ಒಂದೇ ದಾರದಲ್ಲಿ ಪೋಣಿಸುವ ಘನ ಕೈಂಕರ್ಯವನ್ನು ಕೈಗೊಂಡ ದಿವ್ಯ ಚೇತನ ಶ್ರೀ ನಾರಾಯಣ ಗುರುಗಳು. 'ಒಂದೇ ಜಾತಿ ಒಂದೇ ಮತ ಒಂದೇ ದೇವರು' ಎಂಬ ತತ್ವವನ್ನು ಸಾರುವುದರೊಂದಿಗೆ, 'ಶಿಕ್ಷಣ ಪಡೆದು ಸ್ವತಂತ್ರರಾಗಿರಿ; ಸಂಘಟನೆಗೊಂಡು ಪ್ರಗತಿಹೊಂದಿರಿ' ಎಂದು ಸಮಾಜದಲ್ಲಿ 'ನಿಮ್ನರು' ಎಂಬ ಹಣೆಪಟ್ಟಿ ಕಟ್ಟಿಕೊಂಡ ಶೋಷಿತರನ್ನು ಸಂಘಟಿಸುವುದರ ಮೂಲಕ ಅವರ ಬಾಳಿಗೆ ಆರದ ಬೆಳಕು ತೋರಿದವರು. ಸುಮಾರು 80ರಷ್ಟು ಹಿರಿಕಿರಿಯ ಕ್ಷೇತ್ರ ಪ್ರತಿಷ್ಠೆಗಳನ್ನು ಮಾಡಿ, ಆರಾಧನೆಯ ಸ್ವಾತಂತ್ರ್ಯವನ್ನು ಸಾರ್ವತ್ರಿಕಗೊಳಿಸಿದವರು. ಆಳವಾದ ಅಧ್ಯಯನ, ದೀರ್ಘಕಾಲದ ತಪಸ್ಸು, ಶ್ರೇಷ್ಠವಾದ ತಾತ್ವಿಕ ಹಾಗೂ ಜನಪರ ಚಿಂತನೆಗಳೊಂದಿಗೆ ಸುದೀರ್ಘವಾದ ಸುಧಾರಣಾ ಕಾರ್ಯಗಳಿಂದ ಕರ್ನಾಟಕ, ಕೇರಳ, ತಮಿಳುನಾಡು ಮಾತ್ರವಲ್ಲದೆ ಶ್ರೀಲಂಕಾಕ್ಕೂ ತೆರಳಿ ಸಾಮಾಜಿಕ, ಶೈಕ್ಷಣಿಕ, ಧಾರ್ಮಿಕ ಪರಿವರ್ತನೆಗಳಿಗೆ ಕಾರಣಕರ್ತರಾದವರು. ರವೀಂದ್ರನಾಥ ಠಾಗೋರ್, ಮಹಾತ್ಮಾಗಾಂಧಿಯವರಂತಹ ಚಿಂತಕರೂ ತಾವಾಗಿಯೇ ಬಂದು ದರ್ಶನ ಪಡೆದುಕೊಂಡಂತಹ ದಿವ್ಯ ವ್ಯಕ್ತಿತ್ವವನ್ನು ಹೊಂದಿದವರು.

ಆಧುನಿಕ ಭಾರತದ ನಿರ್ಮಾತೃವೆನಿಸಿದ ಶ್ರೀ ನಾರಾಯಣ ಗುರುಗಳ ಸಂಸ್ಕೃತ ಹಾಗೂ ಕನ್ನಡದ ಕಾವ್ಯ ಹಾಗೂ ಬರಹಗಳನ್ನು ಈ ಮೊದಲು "ಶ್ರೀ ನಾರಾಯಣ ಗುರು ಸತ್ಯದರ್ಶನ" ಎನ್ನುವ ಹೆಸರಿನಲ್ಲಿ ಕನ್ನಡಕ್ಕೆ ಅನುವಾದಿಸಿದ ನನ್ನ ಮೇಲೆ ನಾರಾಯಣ ಗುರುಗಳ ಆಧ್ಯಾತ್ಮಿಕ ಹಾಗೂ ಸಾಮಾಜಿಕ ಚಿಂತನೆಗಳು ಬಹಳಷ್ಟು ಪ್ರಭಾವ ಬೀರಿದ್ದವು. ಅವರ ಅನ್ಯಾದೃಶವಾದ ಮಹೋನ್ನತ ವ್ಯಕ್ತಿತ್ವ, ಸಾಮಾಜಿಕ ಸುಧಾರಣಾ ತತ್ವಗಳು, ಸಾಹಿತ್ಯದ ಮೂಲಕ ಅವರು ಸಾರುವ ಸಂದೇಶಗಳು, ಅಂದಿನ ಸಮಾಜದ ಮೇಲೆ ಅವರು ಬೀರಿದ ಅಭೂತಪೂರ್ವವಾದ ಪ್ರಭಾವಗಳು, ಜಾತೀಯತೆಯ ಕುರುಡುತನದಲ್ಲಿ ಅಂಧತೆಗೆ ಒಳಗಾದ ಸಮಾಜದ ಕಣ್ಣುತೆರೆಸುವ ಅವರ ಪ್ರಾಮಾಣಿಕ ಪ್ರಯತ್ನಗಳು ನನ್ನಲ್ಲಿ ಕುತೂಹಲವನ್ನು ಮೂಡಿಸಿದವು. ಸಾಮಾನ್ಯರಲ್ಲಿ ಸಾಮಾನ್ಯನಾಗಿ ಹುಟ್ಟಿದ ವ್ಯಕ್ತಿಯೊಬ್ಬ ತನ್ನ ಸ್ವಸಾಮರ್ಥ್ಯದಿಂದ ಆಧ್ಯಾತ್ಮಿಕ ಸಾಧನೆಯ ಮೂಲಕ ಅತ್ಯುಚ್ಚ ಮಟ್ಟಕ್ಕೆ ಏರಿ, ಬಹುಜನಪ್ರಿಯನೆನಿಸಿ, ಸಾವಿರಾರು ವರ್ಷಗಳಿಂದ ಸಮಾಜವನ್ನು ತನ್ನ ಬಿಗಿಮುಷ್ಟಿಯಲ್ಲಿ ಹಿಡಿದು ಅಲ್ಲಾಡಿಸುತ್ತಿದ್ದ ಸಾಂಪ್ರದಾಯಿಕ ಕಂದಾಚಾರಗಳ ಬುಡವನ್ನೇ ಅಲುಗಾಡಿಸಿದ್ದು, ತನ್ನ ಬದುಕನ್ನೇ ಸಮಾಜದ ಸುಧಾರಣೆಗಾಗಿ ಧಾರೆ ಎರೆದದ್ದು ನನ್ನೊಳಗೆ ಒಂದು ರೀತಿಯ ಆಶ್ಚರ್ಯವನ್ನು ಹುಟ್ಟಿಸಿತು.

MANJUNATHESHWARA LAW COLLEGE

ಕಳೆದ 19 ಹಾಗೂ 20ನೇ ಶತಮಾನದ ಶಕಪುರುಷರಲ್ಲಿ ಓರ್ವರಾಗಿ, ಸಾಮಾಜಿಕ ಧಾರ್ಮಿಕ ಆಧ್ಯಾತ್ಮಿಕ ಸಂಚಲನವನ್ನು ಉಂಟುಮಾಡಿದ ಗುರುಗಳ ಬಗ್ಗೆ ಇನ್ನಷ್ಟು ತಿಳಿದುಕೊಳ್ಳಬೇಕೆಂಬ ಜಿಜ್ಞಾಸೆಯಿಂದ ಶ್ರೀ ನಾರಾಯಣ ಗುರುಗಳ ಜೀವನ ಗಾಥೆಯನ್ನು ಒಳಗೊಂಡ ಮಲಯಾಳಂ, ಕನ್ನಡ, ಇಂಗ್ಲಿಷ್ ಭಾಷೆಗಳಲ್ಲಿನ ಹಲವಾರು ಕೃತಿಗಳನ್ನು ತಿರುವಲಾರಂಭಿಸಿದೆ. ಈ ಸಂದರ್ಭದಲ್ಲಿ ಅವರ ಕುರಿತಾಗಿ ಕನ್ನಡದಲ್ಲಿ ಒಂದು ಕೃತಿಯನ್ನು ರಚಿಸಬೇಕೆಂಬ ಕನಸು ನನ್ನೊಳಗೇ ಚಿಗುರತೊಡಗಿತ್ತು. ಕಾಕತಾಳೀಯ ಎನ್ನುವಂತೆ, ಈ ಮೊದಲು ನನ್ನ ಅನುವಾದ ಕೃತಿಯೊಂದನ್ನು ಬೆಳಕಿಗೆ ತಂದ, ಆತ್ಮೀಯರಾದ ಅಯೋಧ್ಯಾ ಪ್ರಕಾಶನದ ಶ್ರೀ ರೋಹಿತ್ ಚಕ್ರತೀರ್ಥರು ತಮ್ಮ 'ಶಕಪುರುಷರು ಮಾಲಿಕೆ'ಯಲ್ಲಿ ಶ್ರೀ ನಾರಾಯಣ ಗುರುಗಳ ಕುರಿತು ಕೃತಿಯೊಂದನ್ನು ಹೊರತರುವ ಆಲೋಚನೆಯನ್ನು ನನ್ನ ಮುಂದಿಟ್ಟು, ಅದನ್ನು ಬರೆಯುವ ಜವಾಬ್ದಾರಿಯನ್ನು ನನಗೆ ನೀಡಿದರು. ಅದರ ಫಲವಾಗಿ ಚಿಗುರೊಡೆದ ನನ್ನ ಕನಸು ಇಂದೀಗ ಹೆಮ್ಮರವಾಗಿ ಈ ಪುಸ್ತಕದ ರೂಪದಲ್ಲಿ ಫಲವಾಗಿ ಸಹೃದಯರಾದ ತಮ್ಮ ಕೈ ಸೇರುತ್ತಿದೆ.

ಈ ಪುಸ್ತಕ ರಚನೆಗೆ ಪ್ರೋತ್ಸಾಹವನ್ನು ನೀಡುವುದರಿಂದ ಮೊದಲ್ಗೊಂಡು ಮುದ್ರಣದ ಭಾರವನ್ನು ವಹಿಸಿ ಪುಸ್ತಕವು ಬೆಳಕು ಕಾಣಲು ಕಾರಣಕರ್ತರಾದವರು ಶ್ರೀ ರೋಹಿತ್ ಚಕ್ರತೀರ್ಥರು. ಅವರ ಪರಿಚಯವಾದಂದಿನಿಂದ ನನ್ನೊಳಗೆ ಸಾಹಿತ್ಯ ರಚನೆ ಮಾಡಬೇಕೆನ್ನುವ ವಾಂಛೆ ಬೆಳೆಯುತ್ತಲೇ ಇದೆ. ಅವರಿಗೆ ನಾನೆಷ್ಟು ಧನ್ಯತೆಯನ್ನು ಸೂಚಿಸಿದರೂ ಸಾಕಾಗಲಾರದು. ಅವರ ನಿರಂತರವಾದ ಪ್ರೋತ್ಸಾಹದಿಂದ ಈ ಪುಸ್ತಕ ಬೆಳಕು ಕಾಣುತ್ತಿದೆ. ಇದನ್ನು ಪುಸ್ತಕ ರೂಪದಲ್ಲಿ ತರಲು ಅಕ್ಷರಗಳನ್ನು ಜೋಡಿಸಿದ, ಮುದ್ರಣದ ಕಾರ್ಯಗಳಲ್ಲಿ ಒಂದಲ್ಲ ಒಂದು ರೀತಿಯಿಂದ ಸಹಕರಿಸಿ, ಪ್ರಕಾಶಕ್ಕೆ ಒಡ್ಡಿದ ನಾಡಿನ ಪ್ರಸಿದ್ಧ ಪ್ರಕಾಶನ ಸಂಸ್ಥೆ ಅಯೋಧ್ಯಾ ಪ್ರಕಾಶನದ ಶ್ರೀಮತಿ ಉಮಾ ಹೊಳ್ಳ ಹಾಗೂ ಪ್ರತಿಯೊಬ್ಬರಿಗೂ ಅಗಣಿತವಾದ ಕೃತಜ್ಞತೆಗಳನ್ನು ನಾನು ಸಮರ್ಪಿಸುತ್ತಿದ್ದೇನೆ.

ನನ್ನೊಳಗಿನ ಶಕ್ತಿಯನ್ನು ಹೊರಲೋಕಕ್ಕೆ ಪರಿಚಯಿಸಿ, ನಾನು ಬರವಣಿಗೆಯ ಕೈಂಕರ್ಯದಲ್ಲಿ ತನ್ಮಯಗೊಂಡ ಸಮಯದಲ್ಲೆಲ್ಲಾ ಕ್ಷಣ ಕ್ಷಣವೂ ನನ್ನ ದೇಹಾರೋಗ್ಯದ ಬಗ್ಗೆ ಸದಾ ಕಾಳಜಿ ವಹಿಸುತ್ತಾ, ಎಚ್ಚರಿಸುತ್ತಾ, ಮತ್ತೊಂದೆಡೆಯಲ್ಲಿ ಮೌನವಾಗಿ ಪ್ರೋತ್ಸಾಹಿಸುತ್ತಾ, ನನ್ನನ್ನು ಸಹಿಸಿಕೊಳ್ಳುವ, ಒಪ್ಪಿಕೊಳ್ಳುವ ನನ್ನ ಬದುಕಿನ ಸರ್ವವೂ ಆಗಿರುವ ನನ್ನ ಬಾಳಸಂಗಾತಿ ಶ್ರೀ ರಾಮಚಂದ್ರ, ಮುದ್ದು ಮಗಳು ಡಾ. ಕ್ಷಿತಿ, ಮಗನಾಗಿ ಪ್ರೀತಿಯ ಧಾರೆಯನ್ನೇ ಎರೆಯುತ್ತಿರುವ ಅಳಿಯ ಶ್ರೀ ರಾಜೇಶ್, ಮುದ್ದು ಮುದ್ದು ಮಾತುಗಳಿಂದ ಜಗವನ್ನೇ ಮರೆಸಿ ಸ್ಫೂರ್ತಿ ತುಂಬುವ ಮುದ್ದು ಮೊಮ್ಮಕ್ಕಳಾದ ಅನಿರುದ್ಧ್, ಅರಿಲ್ ಮತ್ತು ಕವಿನ್‌ರಿಗೆ ನನ್ನ ಪ್ರೀತಿ ಮಮತೆಯ ನೆನವರಿಕೆಗಳು.

ನನ್ನ ಮೇಲೆ ಸೋದರ ವಾತ್ಸಲ್ಯದ ಧಾರೆಯನ್ನೆರೆಯ್ಯತ್ತಾ, "ಏನಾದರೂ ಬರಿ" ಎಂದು ಸದಾ ನನ್ನ ಬರವಣಿಗೆಯನ್ನು ಪ್ರೋತ್ಸಾಹಿಸುತ್ತಾ, ನನ್ನೊಳಗೆ ಬರವಣಿಗೆಯ

ಶಕ್ತಿಯನ್ನು ತುಂಬುತ್ತಾ ಬಂದಿರುವ ಪ್ರೀತಿಯ ಅಣ್ಣ 'ನಾದಾ'ರಿಗೆ ನಾನು ಚಿರಋಣಿಯಾಗಿರುವೆ. ಅಂತೆಯೇ ನನ್ನ ಮೇಲೆ ಒಲವ ಧಾರೆಯನ್ನು ಹರಿಸುತ್ತಿರುವ ಪ್ರೀತಿಯ ಪಂಚ ಸಹೋದರಿಯರಿಗೂ ನಾನು ಋಣಿ.

ಈ ಪುಸ್ತಕ ರಚನೆಗೆ ಮಾಹಿತಿಯನ್ನು ಪಡೆದುಕೊಳ್ಳಲು ಶ್ರೀ ನಾರಾಯಣ ಗುರುಗಳ ಬದುಕಿಗೆ ಸಂಬಂಧಿಸಿದ ಮಲಯಾಳಂ, ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳ ಹಲವಾರು ಪುಸ್ತಕಗಳನ್ನು ಹಾಗೂ ಅಂತರಜಾಲದ ಬರಹಗಳನ್ನು ನಾನು ಓದಿಕೊಂಡಿದ್ದೇನೆ. ಆ ಎಲ್ಲಾ ಬರಹಗಳಿಗೂ, ಬರಹಗಾರರಿಗೂ ನಾನು ಧನ್ಯತೆಗಳೊಂದಿಗೆ ಆಭಾರಿಯಾಗಿದ್ದೇನೆ.

ಬದುಕಿನ ಪಥಗಳಲ್ಲಿ ನೂರಾರು ಎಡರು ತೊಡರುಗಳನ್ನು ಎದುರಿಸುತ್ತಾ ಸಾಗಬೇಕಾದ ಅನಿವಾರ್ಯತೆಗೆ ಒಳಗಾಗಿ, ಅಡಿಗಡಿಗೂ ಎಡವಿಕೊಂಡು, ಕೊಡವಿಕೊಂಡು ಕ್ರಮಿಸುತ್ತಿರುವ ನಮಗೆಲ್ಲರಿಗೂ ಆಧ್ಯಾತ್ಮಿಕ ಹಾಗೂ ಸಾಮಾಜಿಕ ಚಿಂತನೆಗಳನ್ನೊಳಗೊಂಡ ಶ್ರೀ ನಾರಾಯಣ ಗುರುಗಳ ಬದುಕಿನ ಆದರ್ಶಗಳು, ಅವರು ಸಾರಿದ ಜೀವನ ತತ್ವಗಳು ಬದುಕಿನ ದಾರಿಯುದ್ದಕ್ಕೂ ದಾರಿದೀಪಗಳಾಗಿ ಮುನ್ನಡೆಸುವಂತಾಗಲಿ.

– ಡಾ. ಮೀನಾಕ್ಷಿ ರಾಮಚಂದ್ರ
ಮಂಗಳೂರು

SHRI DHARMASTHALA MANJUNATHESHWARA LAW COLLEGE

# ಒಳಪುಟ

1361

## ಅಧ್ಯಾಯ – 1 – ಜೀವನ ಪಥ


1. ನಾಂದಿ ನುಡಿ 11
2. ಜನನ ಮತ್ತು ಬಾಲ್ಯ 14
3. ಗುರುವನ್ನರಸಿ... 18
4. ಆಧ್ಯಾತ್ಮದ ಹಾದಿಯಲ್ಲಿ 23
5. ಚಟ್ಟಂಬಿ ಸ್ವಾಮಿಗಳೊಂದಿಗೆ 26
6. ಮರುತ್ವಾ ಮಲೆಯಲ್ಲಿ 30
7. ಜನತೆಯೆಡೆಗೆ 34
8. ಅರವಿಪುರಂ ಪ್ರತಿಷ್ಠೆ 39
9. ಗರಿಮೂಡಿಸಿದ ಆಶಾನ್ ಮತ್ತು ಪಲ್ಪು 44
10. ಎಸ್. ಎನ್. ಡಿ. ಪಿ. ಯೋಗ ಸ್ಥಾಪನೆ 49
11. ಶಿವಗಿರಿಯಲ್ಲಿ 53
12. ತಲಶ್ಯೇರಿ ಜಗನ್ನಾಥ ದೇವಾಲಯ ಪ್ರತಿಷ್ಠೆ 60
13. ಪರಿವ್ರಾಜಕನಾಗಿ 68
14. ಆಲುವಾದಲ್ಲಿ 77
15. ದಲಿತೋದ್ಧಾರ 80
16. ಮದರಾಸು ಮತ್ತು ಸಿಲೋನಿನೆಡೆಗೆ 84
17. ಮಹಾತ್ಮರೊಂದಿಗೆ 90
18. ನೂತನ ಕ್ರಾಂತಿ 98
19. ಕೊನೆಯ ದಿನಗಳು 102


## ಅಧ್ಯಾಯ – 2 – ಸಾಧನಾಪಥ


1. ಪೀಠಿಕೆ 106
2. ಜಾತ್ಯಂಧತೆಯಲ್ಲಿ ಕೇರಳ 110
3. ವೈಕಂ ಚಳುವಳಿ 114
4. ಸಾಮಾಜಿಕ ಕ್ರಾಂತಿ 119
5. ಸರ್ವಮತ ಸಮ್ಮೇಳನ 125
6. ಉದ್ಯಮ ಜಾಗೃತಿಯೆಡೆಗೆ... 130


## ಅಧ್ಯಾಯ – 3 – ಗುರುವಚನಪಥ


1. ಗುರುಕೃತಿಗಳು 139
2. ಗುರು ಕಾವ್ಯ ಬಿಂದುಗಳು 159
3. ಗುರುನುಡಿಗಳು 163
4. ಬದುಕಿನ ಗಮನಾರ್ಹ ಘಟನೆಗಳು 166

ಗ್ರಂಥಋಣ 168


SHRI DHARMASTHALA MANJUNATHESHWARA ... MANGALORE

ಇಡಿಯ ಭಾರತವರ್ಷ ಪಾಶ್ಚಾತ್ಯರ ಕೈಗೆ ತನ್ನ ಆತ್ಮವನ್ನೊಪ್ಪಿಸಿ ನಲುಗುತ್ತಿದ್ದಾಗ, ಆರ್ಷೇಯ ಜ್ಞಾನಪರಂಪರೆಯ ಜ್ಯೋತಿಯಂತೆ ಬಂದು ಕತ್ತಲನ್ನು ನಿವಾರಿಸಿದ ಮಹನೀಯರು ಬ್ರಹ್ಮಶ್ರೀ ನಾರಾಯಣ ಗುರುಗಳು. ನಾರಾಯಣಗುರುಗಳು ಅದಾಗಲೇ ಬಹುತೇಕ ನಿಂತೇಹೋಗಿದ್ದ ದೇಗುಲನಿರ್ಮಾಣವೆಂಬ ಕಾರ್ಯಕ್ಕೆ ಮತ್ತೆ ಚಾಲನೆ ಕೊಟ್ಟರು. ಪಾದಶಾಹಿಗಳ ಕ್ರೌರ್ಯಪರಂಪರೆ ಹೇಗಿತ್ತೆಂದರೆ ದೇವಾಲಯಗಳ ನಿರ್ಮಾಣವಿರಲಿ, ತಮ್ಮ ಅಸ್ತಿತ್ವ ಉಳಿಸಿಕೊಳ್ಳುವುದೇ ಆಗ ಹಿಂದುಗಳ ಜೀವನದ ಪರಮ ಗುರಿಯಾದಂತಿತ್ತು. ಅಂಥ ಸಂದರ್ಭದಲ್ಲಿ ಒಂದೆರಡಲ್ಲ, ನೂರಾರು ದೇವಸ್ಥಾನಗಳನ್ನು ಸ್ವತಃ ನಿರ್ಮಿಸುತ್ತ, ಅಳಿದುಳಿದು ಜೀರ್ಣಾವಸ್ಥೆಯಲ್ಲಿದ್ದುದನ್ನು ಜೀರ್ಣೋದ್ಧಾರ ಮಾಡುತ್ತ, ಜನರಿಗೆ ಧಾರ್ಮಿಕರಾಗುವತ್ತ ಪ್ರಚೋದಿಸುತ್ತ, ಅಧ್ಯಾತ್ಮದ ಅಮೃತಬಿಂದುಗಳನ್ನು ಉಣಬಡಿಸಿದ ನಾರಾಯಣಗುರುಗಳು ಓರ್ವ ಅಸಾಮಾನ್ಯ ಸಂತ. ಕೇರಳದಲ್ಲಿ ವ್ಯಾಪಕವಾಗಿ ನಡೆಯುತ್ತಿದ್ದ ಮತಾಂತರದ ಕೆಲಸಕ್ಕೆ ದೊಡ್ಡ ತಡೆಗೋಡೆಯಾಗಿ ನಿಂತು, ಹಿಂದುಗಳನ್ನು ಉಳಿಸಿಕೊಂಡ ಪುಣ್ಯಾತ್ಮರು ಇವರು. ಅಲ್ಲದೆ, ಯಾವಯಾವುದೋ ಆಮಿಷಗಳಿಗೆ ತುತ್ತಾಗಿ ಪರಮತಗಳಿಗೆ ಹೋದವರನ್ನು ಮರಳಿ ಹಿಂದು ಧರ್ಮಕ್ಕೆ ಸೇರಿಸಿಕೊಳ್ಳುವ "ಘರ್ ವಾಪಸಿ" ಪರಿಕಲ್ಪನೆಯನ್ನು ಆ ಕಾಲದಲ್ಲೇ ಸಾಕಾರಗೊಳಿಸಿದ್ದ ದ್ರಷ್ಟಾರ. ನಿಸ್ಸಂಶಯವಾಗಿ ಅವರೊಬ್ಬರು ಶಕಪುರುಷರು.

Buy our books@
www.ayodhyabooks.com

Ayodhya
PUBLICATIONS

9 789391 852757

₹ 199